“ಸಾಧ್ಯನ ಇಲ್ಲ ಶ್ರೀಪಾದ ರಾವ್. ತಪ್ಪು ತಿಳಕೋಬ್ಯಾಡ್ರಿ. ಈಗ ನಮಗ ಭಾಳ ಆಗಿಬಿಟ್ಟಾವ. ಈಗ ದೇವರ್ನ ಕೊಟ್ಟು ವಿದೇಶಕ್ಕ ಹೋಗಾವ್ರು ಭಾಳ ಮಂದಿ. ಇಲ್ಲೇ ಇರಾವ್ರು ಸೈತ ಮಾಡ್ಲಿಕ್ಕಾಗೂದಿಲ್ಲಂತ ಕೊಟ್ಟು ರೊಕ್ಕಾಕೊಟ್ಟು ಹೋಗ್ತಾರ” ಎಂದರು. ಅವರ ಸೂಚನೆಯಂತೆ ಹಿಂದಿನ ಬೀದಿಯಲ್ಲಿ ಹೊಸದಾಗಿ ಬಂದಿದ್ದ ಭಟ್ಟರಲ್ಲಿ ಹೋದಾಗ ಅವರು ತಮ್ಮ ದೇವರ ಮನೆಯನ್ನು ತೋರಿಸಿ, “ನಿಮ್ಮ ದತ್ತಪ್ಪಗ ನಿತ್ಯ ಪೂಜಾ, ಹಬ್ಬ ಹರಿದಿನಗಳೊಳಗ ಪಂಚಾಮೃತ ಅಭಿಷೇಕ, ನೈವೇದ್ಯ ಎಲ್ಲಾ ಪಾಂಗ್ತಾಗಿ ಮಾಡತೇವಿ. ತಿಂಗಳಿಗೆ ಐದು ಸಾವಿರಾಗ್ತದ” ಎಂದಾಗ ಮತ್ತೆ ಬೆಚ್ಚಿ ಬೀಳುವ ಸ್ಥಿತಿ. “ನೋಡಿ ಹೇಳ್ತೇವಿ” ಎಂದು ಜಾರಿಕೊಂಡರು. ಬರುವ ಪಿಂಚಣಿ ತಮಗೇ ಸರಿ ಹೋಗುತ್ತಿತ್ತು. ಇನ್ನು ಕಳಿಸುವದೆಂದರೆ...

ಬೇರೆ ದಾರಿಗಳಿಗಾಗಿ ಶೋಧ ನಡೆಯಿತು. ಬೆಟ್ಟದಂಥ ಸಮಸ್ಯೆಯ ಮಧ್ಯೆ ಪತ್ನಿಯ ಆರೋಗ್ಯ ಕ್ಷೀಣಿಸುತ್ತಿದ್ದುದು ಅವರ ಅರಿವಿಗೇ ಬರಲಿಲ್ಲ. ತಮ್ಮ ಕುಲಪುರೋಹಿತರಾದ ಮಲ್ಹಾರಿ ಭಟ್ಟರಿಗೆ, “ಮದ್ಲಿಂದ ಮಾಡಕೋತ ಬಂದೀರಿ. ನೀವ ಪೂಜಿ ಮಾಡ್ರಿ” ಎಂದು ಕೇಳಿಕೊಂಡರು. ಅವರೂ ಕೈ ಕೈ ಹಿಸುಕಿಕೊಳ್ಳುತ್ತ, “ಇಲ್ಲಂತಿದ್ದಿಲ್ರೀ ರಾಯರ... ಖರೆ ಈಗ ಮಗಾ ಪುಣೆದಾಗ ನೌಕರಿ ಹಿಡದಾನ. ಅಲ್ಲೆ ಕರೀಲಿಕ್ಕತ್ತಾನ. ಗೇಣ ಮನ್ಯಾಗ ನಮ್ಮ ದೇವರನ್ನ ಎಲ್ಲಿಡ್ಲಿ ಅಂತ ವಿಚಾರ ಮಾಡ್ಲಿಕ್ಕತ್ತೇನಿ” ಎಂದರು. ಅವರಿಗೆ ಅವರದ್ದೇ ಆದ ತೊಂದರೆಗಳು. ಅಲ್ಲಿಗೆ ವಿಷಯ ಮುಗಿದಿತ್ತು. ಮನೆಯ ಹತ್ತಿರವಿದ್ದ ಗಣೇಶನ ದೇವಸ್ಥಾನದಲ್ಲಿ ಹೇಳಿಕೊಂಡರು. “ಶ್ರೀಪಾದಾ, ನಿನಗ ಇಲ್ಲಾ ಅನಲಾರ್ದ ಸ್ವಲ್ಪ ಜಾಗ ಕೊಡ್ತೇನಿ. ಒಂದು ಗುಡಿ ಕಟ್ಟಿಸಿ ದತ್ತಪ್ಪನ ಕೂಡಿಸ್ಬಿಡು. ಒಂದ ಲಕ್ಷ ಖರ್ಚಾದೀತು” ಎಂದರು ಅಲ್ಲಿನ ಅಧಿಕಾರಿ ಶಾಂತಪ್ಪ. ಮತ್ತದೇ ಉತ್ತರವಿಲ್ಲದ ಪ್ರಶ್ನೆ. ಇರುವ ಕೊಂಚ ದುಡ್ಡು ತಮ್ಮ ಆರೋಗ್ಯ ಮುಂತಾದ ಅವಶ್ಯಕತೆಗಳಿಗೆ ಬೇಡವೆ? ಹಾಗೂ ಕೊಟ್ಟರೆ ಮಕ್ಕಳಿಬ್ಬರೂ ಹುರಿದು ಮುಕ್ಕಿಬಿಡುತ್ತಾರೆ. ಇರುವವರೆಗೆ ನವರಾತ್ರಿಯ ದತ್ತಪ್ಪನ ಉತ್ಸವ ನಡೆಯಬೇಕು. ಕೈ ನಡೆಯುವಾಗ ಎಲ್ಲರಿಗೂ ಕೊಟ್ಟು ಬೆಳೆಸಿದ್ದಿತ್ತು. ಈಗ... ಯಾರೂ ನೋಡಲು, ಕೇಳಲು ಸಿದ್ಧರಿಲ್ಲ. “ಸುಮ್ಮನ ಗುಡಿವಳಗ, ಮಠದೊಳಗ ಲಾಕರ್ ಮಾಡಿಬಿಡಬೇಕು. ಬ್ಯಾಂಕ್‌ನ್ಯಾಗ ಇದ್ಧಂಗ. ದಿನಾ ಪೂಜಿ ಮಾಡ್ತಿರಬೇಕು ನೋಡು” ಎಂದರು ಪತ್ನಿಗೆ. ವೇದಾ ನಕ್ಕು, “ಎಷ್ಟು ವಿಚಾರ ಮಾಡತೀರಿ ಬಿಡ್ರಿ. ದೇವರಿಗೆ ನಮ್ಮ ತ್ರಾಸು ಗೊತ್ತಿರೂದುಲ್ಲೇನು? ಕೈಲೆ ಆದಷ್ಟು ದಿವ್ಸ ಮಾಡೋದು. ಗುರುಗೊಳು ಕರದಾಗ ಹೋಗಿಬಿಡೋದು” ಎನ್ನುತ್ತ ಮಲಗಿದರು.

ಅದಾವ ಬಾಯಲ್ಲಿ ಹೇಳಿದರೋ... ಎರಡೇ ದಿನಗಳಲ್ಲಿ ಕರೆ ಬರಬೇಕೆ? ಎದೆ ಒತ್ತಿಕೊಂಡು ಕುಸಿದವರು ಮೇಲೇಳಲೇ ಇಲ್ಲ. ಶ್ರೀಪಾದ ಭೋರ್ಯಾಡಿ ಅತ್ತಿದ್ದಷ್ಟೇ ಬಂತು. ಬಂಧು ಬಳಗವೆಲ್ಲ ಸೇರಿತು. ಸುನಿತಾ ನಾಲ್ಕು ದಿನಗಳ ನಂತರ ಬಂದಳು. ಗುರುನಾಥ ಕಾಕೂನ ಅಂತಿಮ ಕಾರ್ಯಗಳನ್ನು ನೆರವೇರಿಸಿದ. ನಂತರ... ತಮಗೆ ಸಂಬಂಧವಿಲ್ಲದವರಂತೆ ಎಲ್ಲ ಹೊರಟು ಹೋದರು. ಅನಿತಾ, ಸುನಿತಾ ತಮ್ಮಲ್ಲೇ ಚರ್ಚೆ ಮಾಡಿಕೊಂಡರು. “ಇನ್ನು ನೀವೊಬ್ಬರ ಗದಗಿನ ಮನ್ಯಾಗಿರೋದು ಬ್ಯಾಡ. ಅನಿತಾನ ಮನಿ ಕೆಳಗ ಬಾಡಿಗಿ ಹಿಡದು ಇದ್ದಬಿಡ್ರಿ. ಎರಡ ಹೊತ್ತೂ ಡಬ್ಬಿ ಹೇಳ್ತದ. ದೇವರನ್ನೆಲ್ಲಾ ಗೋಕರ್ಣದ ಸಮುದ್ರದಾಗ ಮುಳುಗಿಸಿಬಿಡ್ರಿ...” ಎಂದು ಸುನಿತಾ ಖಡಾಖಂಡಿತವಾಗಿ ಹೇಳಿದಳು. ‘ಚಿಕ್ಕಂದಿನಲ್ಲಿ ಸತತ ದತ್ತಪ್ಪನ ಹಾಡು ಹಾಡುತ್ತಿದ್ದ ಮಗು ಇವಳೇನಾ?’ ಎನಿಸಿತು. ಹೆಂಡತಿ ಹೋದ ಗಾಯದ ಮೇಲೆ ಬರೆಗಳು. ‘ತನಗೆ ಊಟ ಹಾಕಲು ಮಗಳಿಗೆ ಸಾಧ್ಯವಿಲ್ಲವಂತೆ’ ಎಂದು ಕುಂಕುಮವಿಟ್ಟುಕೊಂಡು, ಹಾರ ಧರಿಸಿಕೊಂಡು ನಗುತ್ತಿದ್ದ